1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
Spl.C. ನಂ. 213/2022

ದಿನಾಂಕ ಃ 19.01.2026 ರಂದು ಪ್ರಮಾಣ ವಚನ ಬೋಧಿಸಲಾಗಿದೆ.
ಸಿ. ಡಬ್ಲ್ಯೂ:12 ಪಿ. ಡಬ್ಲ್ಯೂ:9

| | |
|---|---|
| ಸಾಕ್ಷಿದಾರರ ಹೆಸರು | ನಿಂಗೇಗೌಡ |
| ತಂದೆಯ ಹೆಸರು | ಕೃಷ್ಣೇಗೌಡ |
| ವಯಸ್ಸು | 67 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಚಾಕೇನಹಳ್ಳಿ ಗ್ರಾಮ, ನಾಗಮಂಗಲ ತಾ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ಚಿಕ್ಕೇಗೌಡ ಗೊತ್ತು, ಅವರು ನಮ್ಮ ಊರಿನವರು.
2. ಆರೋಪಿಯ ಜಮೀನು ನಮ್ಮ ಊರಿನಲ್ಲಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಚಾಕೇನಹಳ್ಳಿಯಲ್ಲಿ ನನಗೆ ಜಮೀನು ಇದೆ. ಸದರಿ ನಮ್ಮ ಜಮೀನಿನಲ್ಲಿ ರಾಗಿ ಬೆಳೆ ಬೆಳಯುತ್ತೇವೆ, ತೆಂಗಿನ ತೋಟ ಇದೆ. ಸದರಿ ನಮ್ಮ ಜಮೀನಿನ ಅಕ್ಕ ಪಕ್ಕದಲ್ಲಿ ನಮ್ಮ ಕುಟುಂಬದವರ ಜಮೀನು ಇರುತ್ತದೆ. ನನ್ನ ದೊಡ್ಡಪ್ಪ ನಿಂಗೇಗೌಡ, ಚಿಕ್ಕಪ್ಪ ಕಿಟ್ಟೇಗೌಡರವರ ಜಮೀನುಗಳು ನಮ್ಮ ಜಮೀನಿನ ಅಕ್ಕ ಪಕ್ಕದಲ್ಲಿ ಇರುತ್ತವೆ. ಚಾಸಾ.13 ರವರ ಜಮೀನುಗಳು ಎಲ್ಲಿದೆ ಎಂದು ನನಗೆ ಖಚಿತವಾಗಿ ಗೊತ್ತಿಲ್ಲ. ನಮ್ಮ ಜಮೀನು ಪೂರ್ವ ಭಾಗದಲ್ಲಿ ಇದೆ, ಚಾಸಾ. 13 ರವರ ಜಮೀನು ಪಶ್ಚಿಮ ಭಾಗದಲ್ಲಿ ಇದೆ.
3. ಮೃತ ಶಿವಕುಮಾರ್ ಗೊತ್ತು, 4 ರಿಂದ 5 ವರುಷಗಳ ಹಿಂದೆ ವಿದ್ಯುತ್ ಆಘಾತವಾಗಿ ಅವರು ಮೃತಪಟ್ಟರೆಂದು ಗೊತ್ತು. ಸದರಿ ಸಮಯದಲ್ಲಿ ನಾನು ಇರಲಿಲ್ಲ, ನಿಮಾನ್ಸ್ ಆಸ್ಪತ್ರೆಯಲ್ಲಿ ಇದ್ದೆನು. ನಿಮಾನ್ಸ್ ಆಸ್ಪತ್ರೆಯಿಂದ ಬಂದ ನಂತರ ಸದರಿ ಶಿವಕುಮಾರ್ ಮೃತಪಟ್ಟ ವಿಚಾರ ನನಗೆ ಗೊತ್ತಾಗಿರುತ್ತದೆ. ಶಿವಕುಮಾರ್ ರವರಿಗೆ ಸೇರಿದ ನಮ್ಮ ಊರಿನಲ್ಲಿ ಇರುವ ಆವರ ಜಮೀನಿನ ಬಳಿ ಅವರು ವಿದ್ಯುತ್ ಆಘಾತವಾಗಿ ಮೃತಪಟ್ಟರೆಂದು ನನಗೆ ಗೊತ್ತಾಗಿರುತ್ತದೆ. ಫ್ರಾಸಾ. 3 ಮತ್ತು 7 ರವರು ಗೊತ್ತು, ಅವರು ನಮ್ಮ ಊರಿನವರು. ಸದರಿ ಶಿವಕುಮಾರ್ ರವರು ಮೃತ ಪಟ್ಟ ಸ್ಥಳಕ್ಕೆ ನಾನು ಹೋಗಿಲ್ಲ, ಆತನ ಶವವನ್ನು ನಾನು

ನೋಡಿಲ್ಲ, ಕಾರಣ ನಾನು ನಿಮಾನ್ಸ್ ಆಸ್ಪತ್ರೆಯಲ್ಲಿ ಇದ್ದೆನು. ಶಿವಕುಮಾರ್ ರವರಿಗೆ ಏನೇನು ಗಾಯಗಳಾಗಿತ್ತು ಎಂದು ನನಗೆ ಗೊತ್ತಿಲ್ಲ. ಯಾವ ರೀತಿ ವಿದ್ಯುತ್ ಆಘಾತವಾಯಿತು ಎಂದು ನಾನು ಮಾಹಿತಿಯನ್ನು ಪಡೆದುಕೊಂಡಿಲ್ಲ. ಆರೋಪಿಯ ಜಮೀನಿನಲ್ಲಿ ನೀರಾವರಿ ವ್ಯವಸ್ಥೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ಶಿವಕುಮಾರ್ ರವರ ಮರಣದ ವಿಚಾರದಲ್ಲಿ ಪೊಲೀಸರು ನನ್ನಿಂದ ಮಾಹಿತಿಯನ್ನು ಪಡೆದಿಲ್ಲ. ಒಂದು ತಿಂಗಳ ನಂತರ ನಾನು ಒಂದು ಸಹಿಯನ್ನು ಮಾಡಿರುತ್ತೇನೆ. ಶಿವಕುಮಾರ್ ರವರು ಮೃತಪಟ್ಟ ವಿಚಾರದಲ್ಲಿ ಯಾರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಶಿವಕುಮಾರ್ ರವರು ಮೃತಪಟ್ಟ ವಿಚಾರದಲ್ಲಿ ನಾನು ಯಾವುದೇ ವಸ್ತುಗಳನ್ನು ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

4. ನನಗೆ ಸೇರಿದ ಚಾಕೇನಹಳ್ಳಿಯಲ್ಲಿ ಇರುವ ಜಮೀನಿನ ಪಕ್ಕದಲ್ಲಿ ಆರೋಪಿಯ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಘಟನೆಗೆ ಒಂದು ವರುಷದ ಪೂರ್ವದಿಂದ ಆರೋಪಿಯು ತನ್ನ ಜಮೀನಿನಲ್ಲಿ ಇರುವ ಬೋರ್ವೆಲ್ ಗೆ 700 ಮೀಟರ್ ದೂರದಲ್ಲಿ ಇರುವ ಚಾಸಾ. 13 ರವರ ಜಮೀನಿನ ಪಕ್ಕದಲ್ಲಿ ಇರುವ transformer ನಿಂದ ಸರ್ವಿಸ್ ಮೈನ್ ವೈರನ್ನು ತಂತಿ ಬೇಲಿ ಮೇಲೆ ತೆಂಗಿನ ಮರಗಳಿಗೆ ಕಟ್ಟಿಕೊಂಡು ಎಳೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

5. ದಿಃ 16.06.2021 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಶಿವಕುಮಾರರವರು ಜಮೀನಿನ ಬಳಿ ವಿದ್ಯುತ್ ಆಘಾತವಾಗಿ ಮೃತಪಟ್ಟಿದಾರೆ ಎಂದು ವಿಚಾರ ತಿಳಿದು ನಾನು ಸ್ಥಳಕ್ಕೆ ಹೋದೆನು ಎಂದರೆ ಸರಿಯಲ್ಲ. ಸ್ಥಳದಲ್ಲಿ ಶಿವಕುಮಾರರವರ ಮೃತ ದೇಹವನ್ನು ನೋಡಿದಾಗ ಅವರ ಬಲಮೊಣಕೈ ಗೆ, ಬಲ ಉಂಗುರದ ಬೆರಳಿಗೆ ವಿದ್ಯುತ್ ತಗುಲಿ ಸುಟ್ಟ ಗಾಯವಾಗಿರುವುದನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪ್ರಾಸಾ.3 ಮತ್ತು 7 ರವರನ್ನು ವಿಚಾರಿಸಿ ಘಟನೆಯ ಬಗ್ಗೆ ತಿಳಿದುಕೊಂಡೆನು ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಚಾಸಾ. 2 ರವರನ್ನು ವಿಚಾರ ಮಾಡಿದಾಗ, ತಾನು ಹಾಗೂ ಶಿವಕುಮಾರರವರು ಜಮೀನಲ್ಲಿ ಪೈಪ್ ಲೈನ್ ಕೆಲಸ ಮಾಡುತ್ತಿದ್ದಾಗ ಸದರಿ ಶಿಮಕುಮಾರ್ ರವರು ತೆವರಿಯಲ್ಲಿ ಇರುವ ಗಿಡಗಳನ್ನು ಕೀಳುತ್ತಿದ್ದಾಗ ಪಕ್ಕದ ಜಮೀನಿನ ಚಾಸಾ. 13 ರವರು ಅವರ ಜಮೀನಿನ ಸುತ್ತ ಹಾಕಿಕೊಂಡ ತಂತಿ ಬೇಲಿಯನ್ನು ಮುಟ್ಟಿದಾಗ ಅವರು ಬಿದ್ದು ಹೋದರೆಂದು, ತಾನು ಎತ್ತಿ

ನೋಡಿದಾಗ ಶಿವಕುಮಾರ್ ರವರು ಮೃತಪಟ್ಟಿದ್ದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಚಾಸಾ.13 ರವರ ತಂತಿ ಬೇಲಿಯನ್ನು ಪರಿಶೀಲಿಸಿದಾಗ ವಿದ್ಯುತ್ ಇರುವುದು ಕಂಡು ಬಂತು ಎಂದು ಸದರಿ ಚಾಸಾ. 13 ರ ವರ ಜಮೀನಿನ ಪಕ್ಕದಲಿ ಇರುವ transformer ನಿಂದ 700 ಮೀಟರ್ ದೂರ ತಂತಿ ಬೇಲಿ ಮೇಲೆ ತೆಂಗಿನ ಮರಗಳಿಗೆ ಕಟ್ಟಿಕೊಂಡು ಆರೋಪಿಯು ಅನಧೀಕೃವಾಗಿ ಸರ್ವಿಸ್ ವೈನ್ ವೈರನ್ನು ಚಾಸಾ. 13 ರವರ ಜಮೀನಿನ ಸುತ್ತಲೂ ಹಾಕಿರುವ ತಂತಿ ಬೇಲಿಯ ಮೇಲೆ ಎಳೆದುಕೊಂಡಿದ್ದು ಸದರಿ ವೈರ್ ಮಳೆ ಗಾಳಿಗೆ ತಂತಿ ಬೇಲಿಗೆ ಉಜ್ಜಿ ಶಿವಕುಮಾರ್ ರವರು ತಂತಿ ಬೇಲಿಯ ಪಕ್ಕದ ಜಮೀನಿನಲ್ಲಿ ಗಿಡ ಕೀಳಲು ಹೋದಾಗ ತಂತಿ ಬೇಲಿಯನ್ನು ಮುಟ್ಟಿ ವಿದ್ಯುತ್ ಆಘಾತವಾಗಿ ಸ್ಥಳದಲ್ಲಿ ಮೃತರಾದರು ಎಂದು ಚಾಸಾ. 2 ರವರು ತಿಳಿಸಿದರು ಎಂದರೆ ಸರಿಯಲ್ಲ. ನಂತರ ಪ್ರಾಸಾ.1 ರವರು ದೂರು ನೀಡಿದರೆಂದು ಆರೋಪಿಯ ವಿರುದ್ಧ ಪ್ರಕರಣ ದಾಖಲಾಯಿತು ಎಂದು ನನಗೆ ತಿಳಿಯಿತು ಎಂದರೆ ಸಾಕ್ಷಿಯು, ಒಂದು ವಾರದ ನಂತರ ನನಗೆ ಘಟನೆ ಬಗ್ಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ದಿಃ 17.06.2021 ರಂದು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ '' ನಮ್ಮ ಗ್ರಾಮದ ಸರ್ವೆನಂಬರ್ ........................................................ ಕಾರಣವಾಗಿರುತ್ತದೆ '' ಎಂಬ ಭಾಗವನ್ನು ಸಾಕ್ಷಿಗೆ ಅಭಿಯೋಜಕರು ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಪಿ.10 ಎಂದು ಗುರುತಿಸಲಾಯಿತು. ಘಟನೆಯ ವಿಚಾರ ಗೊತ್ತಿದ್ದರೂ ಸಹ ಆರೋಪಿಯ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಜಿ ಎಂ ವಕೀಲರಿಂದ ಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.